ತೀರ್ಥಹಳ್ಳಿಯ ಹಿರಿಯ ವ್ಯವಾಹರ ನ್ಯಾಯಾಧೀಶರು ಹಾಗೂ ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ

<u>ಸಿ.ಸಿ. ಸಂಖ್ಯೆಃ **562/2023.**</u>

| | | |
|---|---|---|
| ಪಿರ್ಯಾದುದಾರರು | ವಿರುದ್ಧ | ಆರೋಪಿತರು |
| ಆಗುಂಬೆ ಪೋಲೀಸ್. | | ಸಿದ್ದರಾಜು ಮತ್ತು<br>ಪುನೀತ್ ಸಿ.ಆರ್. |

<u>ದೋಷಾರೋಪಣೆ</u>

ಶ್ರೀ. ಎಸ್.ಎಸ್.ಭರತ್, ಎಂ.ಎ., ಎಲ್‌ಎಲ್.ಎಂ., ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ತೀರ್ಥಹಳ್ಳಿ ಆದ ನಾನು

ಆರೋಪಿ : **01)**ಸಿದ್ದರಾಜು @ ಜ್ಞಾನ ಮೂರ್ತಿ@ ಮೂರ್ತಿ @
ಸೋನು ರಾಜ್ @ ಸುಂದರ್ ರಾಜ್ @ ಸಿದ್ದ
ಬಿನ್ ದೊಡ್ಡ ಸಿದ್ದಯ್ಯ,
ವಯಸ್ಸು ಸುಮಾರು 52 ವರ್ಷ,
ಹಾಲಿ ವಾಸಃ
ಗಂಗಮ್ಮ ದೇವಸ್ಥಾನದ ಹಿಂಭಾಗ,
ಹೆಸರುಘಟ್ಟ ರಸ್ತೆ,
ಚಿಕ್ಕಬಾಣವರ, ಬೆಂಗಳೂರು,
ಬೆಂಗಳೂರು ಸಿಟಿ.
ಖಾಯಂ ವಾಸಃ
19 ನೇ ಕ್ರಾಸ್, ಬಿ.ಎಂ.ಶ್ರೀ. ನಗರ,
ಮೇಟಗಳ್ಳಿ, ಮೈಸೂರು,
ಮೈಸೂರು ನಗರ.

**02)** ಪುನೀತ್ ಸಿ. ಆರ್.
ಬಿನ್ ರವಿ ಗೌಡ ,
ವಯಸ್ಸು ಸುಮಾರು 24 ವರ್ಷ,
ವಾಸಃ ಚಿಕ್ಕಹಳ್ಳಿ ಗ್ರಾಮ,
ಕೋಣನೂರು ಅಂಚೆ,
ಅರಕಲಗೋಡು ತಾಲ್ಲೂಕು,
ಹಾಸನ ಜಿಲ್ಲೆ.

ಹಾಲಿ ವಾಸಃ
ಚಿಕ್ಕಬಾಣಾವರ,
ಹೆಸರುಘಟ್ಟ ರಸ್ತೆ,
ಯಶವಂತಪುರ ಹೋಬಳಿ,
ಬೆಂಗಳೂರು .

ನಿಮ್ಮ ಮೇಲೆ ದೋಷಾರೋಪಣೆ ಮಾಡುವುದು ಏನೆಂದರೆ,

ದಿನಾಂಕಃ30-11-2022 ರಂದು ಮಧ್ಯಾಹ್ನ 02.00 ಗಂಟೆಯ ಸಮಯದಲ್ಲಿ ತೀರ್ಥಹಳ್ಳಿ ತಾಲ್ಲೂಕು ಆಗುಂಬೆ ಪೋಲಿಸ್ ಠಾಣಾ ವ್ಯಾಪ್ತಿಯ ಮೇಗರವಳ್ಳಿ ಗ್ರಾಮದ ಮುಂಡವಳ್ಳಿ ಮಜಿರೆಯಲ್ಲಿರುವ ಸಾಕ್ಷಿ-01 ರವರು ವಾಸವಾಗಿರುವ, ಸಾಕ್ಷಿ-04 ರವರ ಹೆಸರಿನಲ್ಲಿರುವ ವಾಸದ ಮನೆಗೆ ಬೀಗ ಹಾಕಿದ್ದು, ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ, 01 ಮತ್ತು 02 ನೇ ಆರೋಪಿತರಾದ ನೀವುಗಳು ತಾವು ಕದ್ದಿದ್ದ ಸ್ಪ್ಲೆಂಡರ್ ಬೈಕಿನಲ್ಲಿ ಬಂದು, ಮನೆಯ ಮುಂಬಾಗಿಲ ಬಳಿ ಹೋಗಿ, ಕಬ್ಬಿಣದ ರಾಡಿನಿಂದ ಮುಂಬಾಗಿಲನ್ನು ಮೀಟಿ ಮುರಿದು ಮನೆಯೊಳಗೆ ಗೃಹಾತಿಕ್ರಮಣ ಮಾಡಿರುತ್ತೀರಿ. ಆದ್ದರಿಂದ, ನೀವು ಭಾರತೀಯ ದಂಡ ಸಂಹಿತೆ ಕಲಂ.454 ರನ್ವಯ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 01 ಮತ್ತು 02 ನೇ ಆರೋಪಿಯಾದ ನೀವು ಮನೆಯ ಒಳಗಡೆ ಪ್ರವೇಶ ಮಾಡಿ, ಮನೆಯೊಳಗಿದ್ದ ಗಾಡ್ರೇಜ್ ಬೀರಿನಲ್ಲಿದ್ದ ಸುಮಾರು 07.980 ಗ್ರಾಂ ತೂಕದ ಒಂದು ಚಿನ್ನದ ಸರ, ಒಂದು ಬಂಗಾರದ ಉಂಗುರ, ಒಂದು ಜೊತೆ ಬೆಳ್ಳಿ ಕಾಲುಚೈನು ಮತ್ತು 10,000/- ರೂಪಾಯಿ ಮತ್ತು ಇತರೆ ಚಿಲ್ಲರೆ 03,000/-ರೂಪಾಯಿ ಹಣವನ್ನು ಕಳ್ಳತನ ಮಾಡಿದ್ದು, ನೀವು ಭಾರತೀಯ ದಂಡ ಸಂಹಿತೆ ಕಲಂ.380 ರನ್ವಯ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜಾಜ್ಞನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

ಪ್ರಶ್ನೆಃ 01 - ಮೇಲೆ ಓದಿ ಹೇಳಿದ ದೋಷಾರೋಪಣ ಸಾರಾಂಶ ನಿಮಗೆ ತಿಳಿಯಿತೆ?

01 ಮತ್ತು 02 ನೇ

ಆರೋಪಿತರ ಉತ್ತರಃ

ಪ್ರಶ್ನೆಃ 02 - ಮೇಲ್ಕಂಡ ದೋಷಾರೋಪಣಯನ್ನು ನೀವು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗೆ ಒಳಪಡಲು ಬಯಸುವಿರಾ?

01 ಮತ್ತು 02 ನೇ

ಆರೋಪಿತರ ಉತ್ತರಃ

(ಮೇಲ್ಕಂಡ ಆಪಾದನೆಯನ್ನು 01 ಮತ್ತು 02 ನೇ ಆರೋಪಿಗೆ ಓದಿ ಹೇಳಿ ಮೇಲಿನಂತ ಪ್ರಶ್ನಿಸಿ ಅವರು ಹೇಳಿದಂತೆ ಉತ್ತರಗಳನ್ನು ಬರೆದುಕೊಳ್ಳಲಾಯಿತು)

ದಿನಾಂಕಃ **26-12-2023.**

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು,ತೀರ್ಥಹಳ್ಳಿ

01 ನೇ ಆರೋಪಿಯ ಸಹಿಃ

02 ನೇ ಆರೋಪಿಯ ಸಹಿಃ